# ನಮ್ಮ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಪರಿಚಯ

## ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ,

## ಬಾಗೇಪಲ್ಲಿ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ– 561207

| | |
|---|---|
| ಪ್ರಾರಂಭವಾದ ವರ್ಷ ದಿನಾಂಕ | 2018–19ನೇ ಸಾಲು<br>ದಿನಾಂಕ:25–09–2018 |
| ಸರ್ಕಾರಿ ಆದೇಶ ಸಂಖ್ಯೆ | ಎಂಡಬ್ಲ್ಯೂಡಿ 248 ಎಂಡಿಎಸ್ 213 ದಿನಾಂಕ:17–01–2014 |
| ಕಟ್ಟಡದ ವಿಸ್ತೀರ್ಣ | 64/64 |
| ಅಕ್ಷಾಂಶ–ರೇಖಾಂಶ | Lat N 13.446884'<br>Long E 77.715545' |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 50 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 50 |
| ತರಗತಿ | ಪ್ರಥಮ ಪಿಯುಸಿ ಯಿಂದ ಉನ್ನತ ವ್ಯಾಸಂಗದವರೆಗೆ |
| ಮಾಧ್ಯಮ | – |




**:: ವಿವರಣೆ ::**

ಚಿಂತಾಮಣಿ ರಸ್ತೆ ನ್ಯಾಷನಲ್ ಕಾಲೇಜು ಹತ್ತಿರ ಬಾಗೇಪಲ್ಲಿ ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಗೇಪಲ್ಲಿ ಟೌನ್‌ನಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವು ಸನ್ 2018–19 ರಿಂದ ಅಲ್ಪಸಂಖ್ಯಾತರ ಮಕ್ಕಳಿಗೆ ಮತ್ತು ಬಡ ವಿದ್ಯಾರ್ಥಿಗಳಿಗೆ ಭಾಗ್ಯ ವಿಧಾತವಾಗಿ ರಾರಾಜಿಸಿ, ಕಾಮದೇನು ಕಲ್ಪವೃಕ್ಷದಂತೆ 10ನೇ ತರಗತಿಯ ನಂತರದ ವಿದ್ಯಾರ್ಥಿಗಳಿಗೆ ಉಚಿತ, ಖಚಿತವೆಂಬಂತೆ 50 ವಿದ್ಯಾರ್ಥಿಗಳ ಜೀವನದ ಹಾದಿಗೆ ರಸ್ತೆಯ ಪಕ್ಕದಲ್ಲಿರುವ ಮಾರ್ಗ ಸೂಚಿಯಂತೆ ಅವರನ್ನು ಶೈಕ್ಷಣಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ನೈತಿಕ, ಸಕಾರಾತ್ಮಕ, ಬೌದ್ಧಿಕ, ಭೌತಿಕ ಶಾರೀರಿಕ, ತಾಂತ್ರಿಕ, ಆರೋಗ್ಯತ್ಮಕ ದೃಷ್ಟಿಯಿಂದ ಶಿಲೆಗಾರ ಶಿಲ್ಪವನ್ನು ಕೆತ್ತಿ ಶಿಲೆಯ ಅಂದವನ್ನು ಹೆಚ್ಚಿಸುವಂತೆ ನಿಲಯಾರ್ಥಿಗಳ ಜೀವನವನ್ನು ರೂಪಿಸುವಲ್ಲಿ ನವನವೀತವಾದಂತಹ ಭವಿಷ್ಯದ ದೃಷ್ಟಿಯನ್ನು ಇಟ್ಟುಕೊಂಡು ವರ್ತಮಾನದಲ್ಲಿ ಕ್ರಿಯಾತ್ಮಕ ವ್ಯವಸ್ಥೆಯ ಮೂಲಕ ಬೇರೆ ಇಲಾಖೆಯ ನಿಲಯಗಳಿಗೆ ಮಾದರಿಯಾಗಿ ತನ್ನ ದಾಪುಗಾಲನ್ನು ಮುಂದುವರೆಸುತ್ತಿದೆ.

ಶೈಕ್ಷಣಿಕ ಅಭಿವೃದ್ದಿಗಾಗಿ ಸಮೃದ್ಧ ಮತ್ತು ಸುವ್ಯಸ್ಥಿತ ಸ್ಪರ್ಧಾತ್ಮಕ ತಾಂತ್ರಿಕ ಕ್ಷಮತೆ ಮತ್ತು ಪುಸ್ತಕ ಭಂಡಾರವನ್ನು ಹೊಂದಿರುವ ಗ್ರಂಥಾಲಯವನ್ನು ಪ್ರತ್ಯೇಕವಾಗಿ ಅನುಷ್ಠಾನವನ್ನು ಮಾಡಲಾಗಿದೆ. ಸಾಂಸ್ಕೃತಿಕ ಚಟುವಟಿಕೆಯ ದೃಷ್ಟಿಯಿಂದ ಶ್ರೀಮಂತಿಕೆಯನ್ನು ಮೆರೆಯುವುದಕ್ಕಾಗಿ ಪ್ರತಿ ಶುಕ್ರವಾರ ವಿದ್ಯಾರ್ಥಿಗಳಿಗೆ ವೇದಿಕೆಯ ಭಯ ತೊಲಗಿಸುವ ಭಾಷಾ ಸಮೃದ್ಧತೆ ಬೆಳೆಸುವ ವಾಕ್ ಚಾತುರ್ಯವನ್ನು ಗುಣತಾತ್ಮಕಗೊಳಿಸುವ ರೀತಿಯಲ್ಲಿ ನಿಲಯದಲ್ಲಿ ಹಾಡು ಕುಣಿತ ಭಾಷಣದಂತಹ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ರೀತಿಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ನಿಲಯವು ಶಾರೀರಿಕವಾಗಿ ವಿದ್ಯಾರ್ಥಿಗಳನ್ನು ಸದೃಡಮಾಡಲು ಕ್ರೀಡಾ ಸಾಮಾಗ್ರಿಗಳನ್ನು ಮತ್ತು ದೈಹಿಕ ಕಸರತ್‌ನ್ನು ನಡೆಸಲು ಆಧುನೀಕ ಸಲಕರಣೆಗಳಿಂದ ಕೂಡಿದ ವ್ಯಾಯಾಮ ಕೊಠಡಿಯ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕೂಡಿಯುವ ನೀರಿನ ಘಟಕ ವ್ಯವಸ್ಥೆ ಹಾಗೂ ಪೌಷ್ಠಿಕ ಅಂಶದ ಆಹಾರವನ್ನು ನಿಗಧಿತ ಚಾರ್ಟ್ ಪ್ರಕಾರ ನೀಡಲಾಗುತ್ತದೆ. ಸುತಲೂ ಅಂದವಾದ ನಿಸರ್ಗವನ್ನು ಹೊಂದಿರುವುದರ ಜೊತೆಗೆ ಸುಂದರವಾದ ಕೈ ತೋಟವು ಇರುತ್ತದೆ. ಈ ನಿಲಯವು ಪ್ರತ್ಯೇಕವಾದಂತಹ ಸ್ನಾನ ಗೃಹ ಮತ್ತು ಶೌಚಾಲಯವನ್ನು ಹೊಂದಿದ್ದು, ಸೋಲಾರ್ ವಾಟರ್ ಹೀಟರ್ ಮೂಲಕ ಬಿಸಿ ನೀರಿನ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿರುತ್ತದೆ. ನೈರ್ಮಲ್ಯದ ದೃಷ್ಟಿಯಿಂದ ಪರಿಸರವನ್ನು ಶುದ್ಧವಾಗಿಡುವಲ್ಲಿ ಪ್ರಮುಖ ಪಾತ್ರವಹಿಸಿದೆ. ಜೊತೆಗೆ 24 ಗಂಟೆಗಳ ಬೆಳಕಿನ ವ್ಯವಸ್ಥೆಗಾಗಿ ಯು.ಪಿ.ಎಸ್ ವ್ಯವಸ್ಥೆಯನ್ನು ಹೊಂದಿದ್ದು, ನಿಲಯದ ಆವರಣದಲ್ಲಿ ನಾಲ್ಕು ಸೋಲಾರ್ ಬೀದಿ ದೀಪಗಳನ್ನು ಹೊಂದಿರುತ್ತದೆ ಹಾಗೂ ನಿಲಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳಾದ ಕ್ರೀಡಾ ಸಾಮಾಗ್ರಿಗಳನ್ನು, ಸೋಪ್‌ಕಿಟ್, ಬೆಡ್, ಬೆಡ್‌ಶಿಟ್, ಫಿಲ್ಲೋ, 2ಟಯರ್ ಕಾಟ್‌ಗಳ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳ ಸುರಕ್ಷತೆಗಾಗಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ. ಈ ನಿಲಯವು ಇನ್ನು ಹಲವಾರು ಆಧುನೀಕ ಸೌಲಭ್ಯದೊಂದಿಗೆ ವಿದ್ಯಾರ್ಥಿಗಳ ಆಕರ್ಷಣೆಗೆ ಕೇಂದ್ರ ಬಿಂದುವಾಗಿರುತ್ತದೆ.